ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ

ಆ) ಆಯವ್ಯಯದಲ್ಲಿ ಹಣದ ಲಭ್ಯತೆಯನ್ನು ಅನುಸರಿಸಿ ಅವಶ್ಯಕತೆ ಇದ್ದಲ್ಲಿ ಮುಂಬರುವ ವರ್ಷಗಳಲ್ಲಿ ಪರಿಶೀಲಿಸಲಾಗುವುದು.

ಚನ್ನಪಟ್ಟಣ ತಾಲ್ಲೂಕಿನಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಪಶು ವೈದ್ಯ ಶಾಲೆಗಳ ಮಂಜೂರಾತಿ

83 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ): ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ತಾಲ್ಲೂಕಿನಲ್ಲಿ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಹಾಗೂ ಪಶುವೈದ್ಯ ಶಾಲೆಗಳನ್ನು ಮಂಜೂರು ಮಾಡುವ ಎಷ್ಟು ಪ್ರಸ್ತಾವನೆಗಳು ಸರ್ಕಾರದಲ್ಲಿ ಬಾಕಿ ಇವೇ (ಗ್ರಾಮಗಳ ವಿವರ ಒದಗಿಸುವುದು) :

ಆ) ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು?

ಶ್ರೀ ಕೆ.ಎನ್. ನಾಗೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಯಾವ ಪ್ರಸ್ತಾವನೆಯೂ ಬಾಕಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಅಲ್ಪಸಂಖ್ಯಾತ ವರ್ಗದ ವಿದ್ಯಾ ಸಂಸ್ಥೆಗಳಲ್ಲಿನ ಶಿಕ್ಷಕರುಗಳ ನೇಮಕಾತಿ.

84 - ಶ್ರೀ ಸಾದತ್ ಆಲಿಖಾನ್ (ಚನ್ನಪಟ್ಟಣ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಎ) ಅಲ್ಪಸಂಖ್ಯಾತ ವರ್ಗದ ವಿದ್ಯಾಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರುಗಳ ನೇಮಕಾತಿಗಳನ್ನು ಕಳೆದ ಎರಡು ವರ್ಷಗಳಿಂದ ಅನುಮೋದನೆ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಿ) ಹಾಗಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀಮತಿ ನಾಗಮ್ಮ ಸಿ. ಕೇಶವ ಮೂರ್ತಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):

ಎ) ಇಲ್ಲ.

ಬಿ) ಪ್ರಶ್ನೆ ಉದ್ಭವಿಸುವುದಿಲ್ಲ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ (ಅಧ್ಯಕ್ಷರು, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಕಲ್ಯಾಣ ಸಮಿತಿ): ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನದ ಮಂಡಲದ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಕಲ್ಯಾಣ ಸಮಿತಿಯ ಆರನೆಯ ವರದಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು: ಪರಿಶಿಷ್ಟಜಾತಿ ಮತ್ತು ಪರಿಶಿಷ್ಟವರ್ಗಗಳ ಕಲ್ಯಾಣ ಸಮಿತಿಯ ಆರನೆಯ ವರದಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.